# ರಾಜಕುಮಾರಿ ವರಾನ್ವೇಷಣೆ

■ ಕೆ. ಆದಿತ್ಯ ಹೆಬ್ಬಾರ್



ಚಿತ್ರ: ಶಶಿಧರ ಹಳೇಮನಿ

ಶೂರಸೇನನೆಂಬ ರಾಜ. ಅವನ ಏಕಮಾತ್ರ ಪುತ್ರಿ ತಿಲೋತ್ತಮೆ ಅಪೂರ್ವ ಲಾವಣ್ಯವತಿ. ಹದಿಹರೆಯ ತಲುಪಿ ನಳನಳಿಸುತ್ತಿದ್ದಳು. ಈಗಾಗಲೇ ಹಲವು ರಾಜಕುಮಾರರು ಕನ್ಯಾರ್ಥಿಗಳಾಗಿ ಎಡತಾಕಿದ್ದರು. ಆದರೆ ರಾಜ ಶೂರಸೇನನಿಗೆ ಮಗಳ ಅಲೌಕಿಕ ಸೌಂದರ್ಯದ ಬಗ್ಗೆ ಒಂದಿನಿತು ಗರ್ವವಿತ್ತು. ಹಾಗಾಗಿ ಅವಳನ್ನು ಜಗತ್ತಿನಲ್ಲಿಯೇ ಅತ್ಯಂತ ಪರಾಕ್ರಮಿ ಎನಿಸಿಕೊಂಡವನಿಗೆ ಕೊಟ್ಟು ವಿವಾಹ ಮಾಡಬೇಕೆಂಬ ಹೆಬ್ಬಯಕೆ. ಒಂದು ದಿನ ತನ್ನ ಆಸ್ಥಾನ ಜ್ಯೋತಿಷಿಗಳಲ್ಲಿ ಈ ವಿಷಯ ಪ್ರಸ್ತಾಪಿಸಿದ. ಜ್ಯೋತಿಷಿಗಳು ಗುಣಾಕಾರ ಹಾಕಿ ಸದ್ಯಕ್ಕೆ ಜಗತ್ತಿಗೇ ಬೆಳಕು ಕೊಡುವ ಸೂರ್ಯನೇ ವಿಶ್ವದ ಅತ್ಯಂತ ಪರಾಕ್ರಮಿ ಎಂದರು. ರಾಜ ತಡಮಾಡದೇ ಸೂರ್ಯನನ್ನು ಆರಾಧಿಸಿದ.

ಪ್ರತ್ಯಕ್ಷನಾದ ಸೂರ್ಯನ ಬಳಿ ಪ್ರಭಾಕರ, ಜಗತ್ತಿನಲ್ಲಿ ಪ್ರಖರ ಕಿರಣಗಳ ನೀನೇ ಶ್ರೇಷ್ಠ ಪರಾಕ್ರಮಿ ಎಂದು ತಿಳಿಯಲ್ಪಟ್ಟೆ, ನನ್ನ ಮಗಳನ್ನು ವಿವಾಹವಾಗು ಎಂದು ಬಿನ್ನವಿಸಿದ. ಸೂರ್ಯದೇವ ನಿರಾಕರಿಸುತ್ತ ಹೀಗೆಂದ. ರಾಜನ್, ನನಗಿಂತ ಮೋಡಗಳು ಶಕ್ತಿಶಾಲಿ, ಅವುಗಳು ಆವರಿಸಿ ನನ್ನ ಬೆಳಕನ್ನು ಮುಚ್ಚಿ ಬಿಡಬಲ್ಲವು ರಾಜ ಮೋಡಗಳ ಬಳಿ ಬಂದು ವಿಷಯ ತಿಳಿಸಿದ. ಮೋಡಗಳು ಹೇಳಿದವು. ಮಹಾರಾಜ, ನಮಗಿಂತಲೂ ವಾಯುದೇವನೇ ಅಗಣಿತ ಪರಾಕ್ರಮಿ. ಅವನು ಬಲವಾಗಿ ಬೀಸಿದರೆ ನಾವು ಚೆಲ್ಲಾಪಿಲ್ಲಿಯಾಗಿ ಬಿಡುತ್ತೇವೆ. ಅವನೇ ಯೋಗ್ಯ ವ್ಯಕ್ತಿ.

ಮಹಾರಾಜ ಶೂರಸೇನ ವಾಯುದೇವನ ಬಳಿ ಬಂದು ಮದುವೆಯಾಗುವಂತೆ ಯಾಚಿಸಿದ. ವಾಯುದೇವ ಅಡ್ಡಡ್ಡ ತಲೆಯಾಡಿಸಿದ. ರಾಜನೇ, ನನಗಿಂತಲೂ ಎಷ್ಟೇ ಬಲವಾಗಿ ಬೀಸಿದರೂ ಅಚಲವಾಗಿ ನಿಲ್ಲುವ ಪರ್ವತ ರಾಜನೇ ಯೋಗ್ಯವರ! ಅವನಲ್ಲಿ ವಿಚಾರಿಸು ಎಂದ. ರಾಜ ತಡಮಾಡದೇ ಪರ್ವತರಾಜನ ಬಳಿ ಬೇಡಿಕೆಯಿಟ್ಟ. ಪರ್ವತರಾಜನೇ ನೀನೇ ಜಗತ್ತಿನಲ್ಲಿ ಅತಿ ಶೂರ. ನನ್ನ ಮಗಳನ್ನು ವಿವಾಹವಾಗು ಪರ್ವತರಾಜ ನಿರಾಕರಿಸಿ ಹೇಳಿದ.

ದೊರೆಯೇ ಯಾರಿಂದಲೂ ನನ್ನನ್ನು ಅಲುಗಿಸಲಾಗದು, ನಿಜ, ಆದರೆ ಒಂದು ಸಣ್ಣ ಪ್ರಾಣಿ ನನ್ನ ಮೈಯಲ್ಲಿ ರಂಧ್ರಗಳನ್ನು ಕೊರೆದು ಉರುಳಿಸಬಲ್ಲದು. ಅದುವೇ ಮೂಷಿಕರಾಜ, ಅವನಲ್ಲಿ ಹೋಗು. ರಾಜ ಲಗುಬಗೆಯಿಂದ ಮೂಷಿಕರಾಜನ ಬಳಿ ಓಡಿದ. ತನ್ನ ಕೋರಿಕೆಯನ್ನು ಬಿನ್ನವಿಸಿದ, ಇಲಿರಾಜ ಕ್ಷಮಿಸಿ ರಾಜನ್, ನಾವು ಎಷ್ಟೇ ಬಲಶಾಲಿಗಳಾದರೂ ಮಾರ್ಜಾಲಗಳು ಅಂದರೆ ಬೆಕ್ಕುಗಳ ಮುಂದೆ ನಿಲ್ಲಲಾಗುವುದಿಲ್ಲ, ಅವುಗಳೇ ನಿಮ್ಮ ಅಳಿಯನಾಗಲು ಯೋಗ್ಯರು ರಾಜನಿಗೆ ಇನ್ನೂ ಉತ್ಸಾಹ ಬತ್ತಿರಲಿಲ್ಲ, ಛಲ ಬಿಡದೇ ಮಾರ್ಜಾಲ ರಾಜನಲ್ಲಿ ಹೋಗಿ ವಿಷಯ ತಿಳಿಸಿ ಉತ್ತರಕ್ಕೆ ಕಾದ.

ರಾಜ, ನಾವು ಮಾರ್ಜಾಲಗಳು ಇಲಿಗಳಿಗಿಂತ ಧೀರರು ನಿಜ. ಆದರೆ ನಾಯಿಗಳು ನಮ್ಮ ವೈರಿ ವೀರರು. ಅವರು ನಮ್ಮನ್ನು ಒಂದೇ ಏಟಿಗೆ ಕಬಳಿಸಬಲ್ಲರು. ಹಾಗಾಗಿ ಅವರೇ ವಿಶ್ವದ ಅತ್ಯಂತ ಪರಾಕ್ರಮಶಾಲಿಗಳು ಮಹಾರಾಜ ಮತ್ತೆ ಓಡೋಡಿ ಶುನಕರಾಜನಲ್ಲಿ ಬಂದು ತನ್ನ ಮಗಳನ್ನು ವಿವಾಹವಾಗುವಂತೆ ಬೇಡಿಕೆಯಿಟ್ಟ, ಶುನಕರಾಜ ಯೋಚಿಸಿ ರಾಜನ ಕಿವಿಯಲ್ಲಿ ಹೇಳಿದ.

ಪ್ರಭು, ನಿಮ್ಮನ್ನು ನೋಡಿದರೆ ಅಯ್ಯೋ ಎನಿಸುತ್ತಿದೆ. ನಾವೆಲ್ಲ ಎಷ್ಟೇ ಶೂರರಾದರೂ ಮನುಜರ ಮುಂದೆ ಸರಿಸಾಟಿಯಾಗಲಾರೆವು. ಜಗತ್ತಿನಲ್ಲಿ ಅತ್ಯಂತ ಶಕ್ತಿಶಾಲಿಗಳೆಂದರೆ ಮನುಜರೇ. ಹಾಗಾಗಿ ನಿಮ್ಮಲ್ಲಿಯೇ ಒಬ್ಬರಿಗೆ ರಾಜಕುಮಾರಿಯನ್ನು ಕೊಟ್ಟು ವಿವಾಹ ಮಾಡಿ ರಾಜನಿಗೆ ಜ್ಞಾನೋದಯವಾಗಿತ್ತು. ತನ್ನ ಯೋಚನಾ ಲಹರಿ ತಪ್ಪೆಂದು ಅರಿವಾಗಿತ್ತು. ಕೆಲದಿನಗಳಲ್ಲಿಯೇ ಸ್ವಯಂವರ ಏರ್ಪಡಿಸಿ ತನ್ನ ಪುತ್ರಿಯನ್ನು ಶ್ರೇಷ್ಠ ರಾಜಕುಮಾರನೊರ್ವನೊಂದಿಗೆ ವಿಜೃಂಭಣೆಯಿಂದ ಜರುಗಿಸಿದ. ■